## ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 733
2. ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ: : 17.9.2021
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ರಾಜ್ಯದ ವಿಕೇಂದ್ರೀಕರಣ ಪದ್ಧತಿಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಿವಿಧ ಹುದ್ದೆಗಳ ಅಧಿಕಾರಿಗಳು/ಸಿಬ್ಬಂದಿಗಳ<br><br>ಹುದ್ದೆಗಳನ್ನು (Staffing pattern) ಸೃಜಿಸಲಾಗಿದ್ದು, ಈ ಮೂರು ಹಂತಕ್ಕೂ ಈವರೆವಿಗೂ ಗ್ರೂಫ್-ಸಿ ಮತ್ತು ಗ್ರೂಫ್-ಡಿ ಹುದ್ದೆಗಳಿಗೆ ವೃಂದ ಮತ್ತು ನಿಯಮ ಇಲ್ಲದಿರಲು ಕಾರಣವೇನು;</td><td>ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆ.ಎಸ್.ಎಸ್. 2016, ದಿನಾಂಕ:20.7.2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು-2020 ನ್ನು ರಚಿಸುವ ಮೂಲಕ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್‌ಗಳ ವಿವಿಧ ವೃಂದಗಳ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ.<br><br>ಗ್ರಾಮ ಪಂಚಾಯತ್‌ಗಳಲ್ಲಿ ಮಂಜೂರಾಗಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಗ್ರೇಡ್-1, ಕಾರ್ಯದರ್ಶಿ ಗ್ರೇಡ್- 2 ಮತ್ತು ದ್ವಿತಿಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ, ಅಧಿಸೂಚನೆ ಸಂಖ್ಯೆ: ಗ್ರಾಅಪ 306 ಕೆ.ಎ.ಎಸ್.ಎಸ್ 2005, ದಿನಾಂಕ:20.1.2011 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳ-2008, ನಂತರ ತಿದ್ದುಪಡಿ ನಿಯಮಗಳು -2011 ಮತ್ತು 2012 ನ್ನು ರಚಿಸಲಾಗಿದೆ.</td></tr>
<tr><td>ಆ</td><td>ಪ್ರತಿ ಹಂತದ ವ್ಯವಸ್ಥೆಯಡಿ (Staffing pattern) ಸೃಜಿಸಲಾದ ಗ್ರೂಫ್- ಸಿ ಮತ್ತು ಡಿ ಹುದ್ದೆಗಳು ಎಷ್ಟು;</td><td>ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳು.<br><br><table><tr><th>ಕ್ರ.ಸಂ.</th><th>ಹುದ್ದೆಯ ಹೆಸರು</th><th>ಮಂಜೂರಾದ ಹುದ್ದೆಗಳು</th></tr><tr><td>1</td><td>ಅಧೀಕ್ಷಕ</td><td>268</td></tr><tr><td>2</td><td>ಪ್ರಥಮ ದರ್ಜೆ ಲೆಕ್ಕ</td><td>703(ನಿಯೋಜನೆ)</td></tr></table></td></tr>
</table>

<table>
<tr><td></td><td></td><td></td><td>ಸಹಾಯಕ</td><td></td></tr>
<tr><td></td><td></td><td>3</td><td>ಯೋಜನಾ ಸಹಾಯಕ</td><td>226 (ನಿಯೋಜನೆ)</td></tr>
<tr><td></td><td></td><td>4</td><td>ಪ್ರಥಮ ದರ್ಜೆ ಸಹಾಯಕ</td><td>724</td></tr>
<tr><td></td><td></td><td>5</td><td>ಶೀಘ್ರಲಿಪಿಗಾರರು</td><td>413</td></tr>
<tr><td></td><td></td><td>6</td><td>ದ್ವಿತೀಯ ದರ್ಜೆ ಸಹಾಯಕ</td><td>903</td></tr>
<tr><td></td><td></td><td>7</td><td>ಬೆರಳಚ್ಚುಗಾರರು</td><td>730 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td></td><td></td><td>8</td><td>ವಾಹನ ಚಾಲಕ</td><td>523 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td></td><td></td><td>9</td><td>ದಲಾಯತ್</td><td>1213 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td></td><td></td><td colspan="3">ಗ್ರಾಮ ಪಂಚಾಯತ್‌ಗಳು</td></tr>
<tr><td></td><td></td><td>10</td><td>ಪಂಚಾಯತ್ ಅಭಿವೃದ್ಧಿ ಅಧಿಕಾರಿ</td><td>6021</td></tr>
<tr><td></td><td></td><td>11</td><td>ಕಾರ್ಯದರ್ಶಿ(ಗ್ರೇಡ್-1)</td><td>2177</td></tr>
<tr><td></td><td></td><td>12</td><td>ಕಾರ್ಯದರ್ಶಿ (ಗ್ರೇಡ್-2)</td><td>3844</td></tr>
<tr><td></td><td></td><td>13</td><td>ದ್ವಿತೀಯ ದರ್ಜೆ ಲೆಕ್ಕ ಸಹಾಯಕ</td><td>2579</td></tr>
<tr><td>ಇ</td><td>ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಅಡಿ ಭರ್ತಿ ಮಾಡಲಾಗುವುದೇ;</td><td colspan="3">ಖಾಲಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳುನಸಾರ ನೇರ ನೇಮಕಾತಿ ಹಾಗೂ ಮುಂಬಡ್ತಿಗೆ ನಿಗಧಿಪಡಿಸಿರುವ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತದೆ.</td></tr>
<tr><td>ಈ</td><td>ಪ್ರಸ್ತುತ ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ಇಲಾಖೆಯ ಮೂಲ ನೌಕರರೇ /ಬೇರೆ ಬೇರೆ ಇಲಾಖೆಯ ವಿಲೀನವಾದ/ಅನುಕಂಪದ ಆಧಾರದ ನೌಕರರು ಇದ್ದಲ್ಲಿ ಅವರ ಪದೋನ್ನತಿ, ಪಿಂಚಣಿ ಇತರ</td><td colspan="3"><u>ಮುಂಬಡ್ತಿಗೆ ಸಂಬಂಧಿಸಿದಂತೆ:-</u> ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆ.ಎಸ್.ಎಸ್. 2016, ದಿನಾಂಕ:20.7.2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು-2020 ನ್ನು ರಚಿಸಿದ್ದು, ಸದರಿ ನಿಯಮಗಳನುಸಾರ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ</td></tr>
</table>

| | | |
|---|---|---|
| | ಉಪದಾನಗಳ ಸ್ವರೂಪವೇನು. | ಮುಂಬಡ್ತಿ ಪಡೆಯಲು ಅರ್ಹರಿರುತ್ತಾರೆ.<br>**ಪಿಂಚಣಿ, ನಿವೃತ್ತಿ ಉಪದಾನಕ್ಕೆ ಸಂಬಂಧಿಸಿದಂತೆ:-**<br>ದಿನಾಂಕ:01.4.2006ಕ್ಕೂ ಪೂರ್ವದಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಲ್ಲಿ ವಿವಿಧ ಮೂಲಗಳಿಂದ ಸಕ್ರಮಗೊಂಡ/ ಅನುಕಂಪದ ಆಧಾರದ ಮೇಲೆ ನೇಮಕ ಹೊಂದಿದ್ದ ನೌಕರರಿಗೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಉದ್ದೇಶಕ್ಕೆ ನೌಕರರ ವಿವರಗಳೊಂದಿಗೆ ದಿನಾಂಕ:15.3.2017 ರಂದು ಸರ್ಕಾರವು ಮೂರು ಆದೇಶಗಳನ್ನು ಹೊರಡಿಸಿ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆ.<br><br>ದಿನಾಂಕ:01.4.2006 ರ ನಂತರ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿದ್ದು, ಸದರಿ ದಿನಾಂಕದ ನಂತರ ನೇಮಕಗೊಂಡ ನೌಕರರುಗಳಿಗೆ ಹೊಸ ಪಿಂಚಣಿ ಯೋಜನೆಯಂತೆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ. |

ಗ್ರಾಅಪ 186 ಕೆ.ಎಸ್.ಎಸ್ 2021(ಇ)

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ

PMKSY-WDC ಯೋಜನೆಯಡಿ ಜಿಲ್ಲಾವಾರು ಅನುಮೋದನೆಗೊಂಡ ಯೋಜನೆಗಳು, ಮುಕ್ತಾಯಗೊಂಡ ಯೋಜನೆಗಳು ಹಾಗೂ ಮುಕ್ತಾಯ ಹಂತದಲ್ಲಿರುವ ಯೋಜನೆಗಳ ವಿವರಗಳು

| ಕ್ರ ಸಂ | ಜಿಲ್ಲೆ | ಒಟ್ಟು ಅನುಮೋದನೆ ನೀಡಲಾದ ಯೋಜನೆಗಳ ಸಂಖ್ಯೆ (ಬ್ಯಾಚ್–1 ರಿಂದ 6) | ಮುಕ್ತಾಯಗೊಂಡ ಯೋಜನೆಗಳ ಸಂಖ್ಯೆ | ಪ್ರಸ್ತುತ ಮುಕ್ತಾಯದ ಹಂತದಲ್ಲಿರುವ ಯೋಜನೆಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 15 | 11 | 1 |
| 2 | ಬೆಂಗಳೂರು | 11 | 7 | 2 |
| 3 | ಬೆಳಗಾವಿ | 31 | 20 | 3 |
| 4 | ಬಳ್ಳಾರಿ | 29 | 19 | 3 |
| 5 | ಬೀದರ್ | 20 | 12 | 3 |
| 6 | ವಿಜಯಪುರ | 27 | 15 | 2 |
| 7 | ಚಾಮರಾಜನಗರ | 16 | 10 | 2 |
| 8 | ಚಿಕ್ಕಬಳ್ಳಾಪುರ | 19 | 13 | 2 |
| 9 | ಚಿಕ್ಕಮಗಳೂರು | 13 | 9 | 1 |
| 10 | ಚಿತ್ರದುರ್ಗ | 28 | 17 | 3 |
| 11 | ದಕ್ಷಿಣ ಕನ್ನಡ | 15 | 10 | 0 |
| 12 | ದಾವಣಗೆರೆ | 13 | 9 | 2 |
| 13 | ಧಾರವಾಡ | 18 | 13 | 2 |
| 14 | ಗದಗ | 20 | 14 | 0 |
| 15 | ಕಲಬುರಗಿ | 33 | 17 | 5 |
| 16 | ಹಾಸನ | 23 | 14 | 4 |
| 17 | ಹಾವೇರಿ | 21 | 17 | 0 |
| 18 | ಕೊಡಗು | 6 | 3 | 1 |
| 19 | ಕೋಲಾರ | 19 | 14 | 2 |
| 20 | ಕೊಪ್ಪಳ | 18 | 12 | 3 |
| 21 | ಮಂಡ್ಯ | 18 | 13 | 1 |
| 22 | ಮೈಸೂರು | 21 | 11 | 4 |
| 23 | ರಾಯಚೂರು | 20 | 14 | 0 |
| 24 | ರಾಮನಗರ | 12 | 8 | 2 |
| 25 | ಶಿವಮೊಗ್ಗ | 25 | 19 | 2 |
| 26 | ತುಮಕೂರು | 40 | 24 | 4 |
| 27 | ಉಡುಪಿ | 9 | 5 | 1 |
| 28 | ಉತ್ತರಕನ್ನಡ | 18 | 13 | 2 |
| 29 | ಯಾದಗಿರಿ | 13 | 7 | 2 |
| ಒಟ್ಟು | | **571** | **370** | **59** |

ಆಯುಕ್ತರು

ಜಲಾನಯನ ಅಭಿವೃದ್ಧಿ ಇಲಾಖೆ